30/35 -1

DIVINE LIFE SOCIETY,
MERCARA, BRANCH.

ಸ್ವಾಮಿ ಶಿವಾನಂದಜಿಯವರ
ಪವಿತ್ರ ವಚನ.

ದೈವಿಕ ಜೀವನ

೧ ನುಡಿ

ಮೆದುವಾಗಿ ಮಾತನಾಡಿರಿ. ಇಂಪಾಗಿ ಮಾತನಾಡಿರಿ. ಸತ್ಯವನ್ನೇ ನುಡಿಯಿರಿ. ಪ್ರೀತಿಯಿಂದ ನುಡಿಯಿರಿ. ಹೆಚ್ಚು ಮಾತನಾಡುವ ಮುನ್ನ ಚೆನ್ನಾಗಿ ಯೋಚಿಸಿರಿ.

೨ ಸೇವೆ

ಬಡವರ ಸೇವೆ ಮಾಡಿರಿ. ರೋಗಿಗಳ ಮತ್ತು ದೀನರ ಸೇವೆ ಮಾಡಿರಿ. ಪ್ರೀತಿಯಿಂದಲೂ, ಭಕ್ತಿಯಿಂದಲೂ ಸೇವೆ ಮಾಡಿರಿ. ಸೇವೆಯೇ ಪೂಜೆ. ಇದೇ ಹಿರಿದಾದ ಮತ. ಸ್ವಯಂ ಸೇವಕರಾಗಿರಿ. ಪ್ರಥಮ ಚಿಕಿತ್ಸೆಯ ಕ್ರಮಗಳನ್ನು ಕಲಿತುಕೊಳ್ಳಿರಿ.

೩ ಪೂಜೆ

ನಿತ್ಯವೂ ಪ್ರಾರ್ಥನೆ ಮಾಡಿ. ಧ್ಯಾನ ಮಾಡಿ. ದೇವರ ನಾಮವನ್ನು ಜಪಿಸಿರಿ. ಮನಸ್ಸಿನ ಅಂತರಾಳ ಭಕ್ತಿಯಿಂದಲೂ, ಪ್ರೀತಿಯಿಂದಲೂ ಪ್ರಾರ್ಥನೆ ಸಲ್ಲಿಸಿರಿ. ಮನಸ್ಸಿನ ಶುದ್ಧಿಗಾಗಿ, ಜ್ಞಾನಕ್ಕಾಗಿ, ಭಕ್ತಿಗಾಗಿ ದೇವರನ್ನು ಪ್ರಾರ್ಥಿಸಿರಿ.

೪ ಪಾಠ

ನಿಮ್ಮ ಧರ್ಮ ಪುಸ್ತಕಗಳ ಓದುವ ಜೊತೆಗೆ ನಿತ್ಯವೂ ಕುರಾನ್, ಬೈಬಲ್, ಭಗವದ್ಗೀತಾ, ಉಪನೀಷತ್, ಜೆಂದಾವೆಸ್ತಾ ಮೊದಲಾದ ಪವಿತ್ರ ಪುಸ್ತಕಗಳನ್ನು ಪರಿಸಿರಿ. ಓದಿದುದನ್ನು ಕಾರ್ಯರೂಪಕ್ಕೆ ತರಲು ಪ್ರಯತ್ನಿಸಿರಿ. ಹೀಗೆ ಮಾಡುವುದರಿಂದ ನೀವು ವಿಕಾಸ ಹೊಂದುವಿರಿ.

೫ ಸೈರಣೆ

ಎಲ್ಲಾ ಮತಗಳನ್ನೂ, ಪದ್ಧತಿಗಳನ್ನೂ ಮತ್ತು ಧರ್ಮಗಳನ್ನೂ ಸನ್ಮಾನಿಸಿರಿ. ಎಲ್ಲಾ ಮತಗಳ ಮಹಾತ್ಮರನ್ನೂ, ಸಾಧು ಸಂತರನ್ನೂ ಗೌರವಿಸಿರಿ. ಎಲ್ಲಾ ಮತಗಳೂ ನಮ್ಮನ್ನು ದೇವರಲ್ಲಿಗೆ ಕರೆದೊಯ್ಯುವ ಮಾರ್ಗಗಳು ಈ ವಿಷಯವನ್ನು ಚೆನ್ನಾಗಿ ಜ್ಞಾಪಕದಲ್ಲಿಡಿರಿ.

೬ ಮತಗಳ ಸಾರ

ಎಲ್ಲರನ್ನು ಪ್ರೀತಿಸಿರಿ, ಎಲ್ಲರಿಗೂ ಸೇವೆ ಸಲ್ಲಿಸಿರಿ. ದಯೆ, ಸತ್ಯ, ಪರಿಶುದ್ಧತೆ, ವಿನಯ, ಕನಿಕರ ಮತ್ತು ಉದಾರ ಗುಣಗಳನ್ನು ಗಳಿಸಿರಿ. ಇತರರ ಮನಸ್ಸನ್ನು ಎಂದೂ ನೋಯಿಸಬೇಡಿರಿ. ಎಲ್ಲರಲ್ಲಿಯೂ ದೇವರಿದ್ದಾನೆಂಬುದನ್ನು ಗ್ರಹಿಸಿರಿ. ತಂದೆ, ತಾಯಿ, ಗುರುಹಿರಿಯರಲ್ಲಿ ವಿಧೇಯರಾಗಿರಿ. ನಿಜಕ್ಕೂ ನೀವು ಹುಟ್ಟು, ಸಾವು, ನೋವು, ರೋಗರಹಿತ ಅಮರ ಆತ್ಮರು. ನೀವೇ ಎಲ್ಲಾ ಆನಂದ, ಎಲ್ಲಾ ಜ್ಞಾನ, ಎಲ್ಲಾ ಬುದ್ಧಿ. ಇದನ್ನು ಚೆನ್ನಾಗಿ ಗ್ರಹಿಸಿಕೊಳ್ಳಿರಿ. ಇದೇ ದೈವಿಕ ಜೀವನ.

೭ ದೇವರ ಮಹಿಮೆ

ಪ್ರೀತಿಯೇ ದೇವರು. ಸತ್ಯವೇ ದೇವರು ಶಾಂತಿಯೇ ದೇವರು. ಪ್ರಕಾಶವೇ ದೇವರು. ಶಕ್ತಿಯೇ ದೇವರು. ಜ್ಞಾನವೇ ದೇವರು. ದೇವರು ನಿಮ್ಮ ಹೃದಯದಲ್ಲಿ ವಾಸವಿದ್ದಾನೆ. ಆತನನ್ನು ಸಾಕ್ಷಾತ್ಕಾರ ಮಾಡಿಕೊಳ್ಳಿರಿ. ಮತ್ತು ಬಂಧನದಿಂದ ಬಿಡುಗಡೆ ಹೊಂದಿರಿ.

ನನ್ನ ಪ್ರಿಯ ಜ್ಯೋತಿಯೇ ಭಗವಂತನು ನಿಮ್ಮನ್ನು ಆಶೀರ್ವದಿಸಲಿ.

Published by the Mercara Branch of the Divine Life Society, Coorg District, Karnataka State.
President: General Cariappa(Retd)
Hony. Secretary: Shri N. S. Poonacha.
MERCARA.

On the occasion of the 88th Birthday of the late His Holiness Swamy Sivananda.
8th September 1974.